
ನಂದಕಿಶೋರ್.... ಹೀಗೆ ಕೇಳುತ್ತಿದ್ದೇನೆ ಅಂತ ಬೇಸರಿಸಬೇಡಿ. ನಮ್ಮ ಅಪ್ಪ ಅಪಾತ್ರರಿಗೆಲ್ಲ ದಾನ ಮಾಡಿ ಇದ್ದದ್ದನ್ನೆಲ್ಲ ಕಳೆದುಕೊಂಡು ಇಲ್ಲಿ ಬಂದು ಮಲಗಿದ್ದಾರೆ. ನಮಗೆ ಈಗ ಜೀವನಕ್ಕೆ ಏನೂ ಇಲ್ಲ ಅಂತ ಆಗಿದೆ. ಅವರಿಗೆ ಟ್ರೀಟ್‌ಮೆಂಟ್‌ಗೆ ಅರ್ಜೆಂಟಾಗಿ ಹತ್ತು ಸಾವಿರ ಬೇಕಾಗಿದೆ. ನೀವು ಎಷ್ಟು ಸಾಧ್ಯವೋ ಅಷ್ಟು ಕೊಡಬೇಕು. ನಾನು ಕೇಳಬಾರದಿತ್ತು, ಆದರೆ ಕೇಳುತ್ತಿದ್ದೇನೆ. ಅನಿವಾರ್ಯ....' ಎಂದ.



ಹೀಗೆ ಹೇಳಿ ಕರ್ಚೀಫ್ ತೆಗೆದು ಮುಖಕ್ಕೆ ಹಿಡಿದು ತಲೆತಗ್ಗಿಸಿ ಕುಳಿತ. ನಂದಕಿಶೋರ ಸ್ವಲ್ಪಹೊತ್ತು ಯೋಚಿಸಿ ತನ್ನ ಪರ್ಸ್ ತೆಗೆದು ಎಷ್ಟಿದೆ ಎಂದು ನೋಡಿದ. ಮೂರು ಸಾವಿರ ರೂಪಾಯಿ ಕೊಡಬಹುದು ಅನಿಸಿತು. ಮಾತಿಲ್ಲದೆ ಅಷ್ಟನ್ನು ಎಣಿಸಿ ರಾಜನ ಕೈಯಲ್ಲಿಟ್ಟ. ಕಾಫಿಯ ಬಿಲ್ಲನ್ನು ಕೂಡಾ ತಾನೇ ಪಾವತಿಸಿದ.

ಇದಾದ ಕೆಲವು ದಿನಗಳ ನಂತರ ನಾರಾಯಣ ತಂತ್ರಿಗಳು ಸಿಕ್ಕಿದ್ದರು. ತಂತ್ರಿಗಳ ಬಳಿ ರಾಮಚಂದ್ರ ರಾಯರ ಕಷ್ಟದ ಕತೆಯನ್ನು ಹೇಳಿ ರಾಜನ ಬಳಿ ಅವರ ಚಿಕಿತ್ಸೆಗೆಂದು ಹಣ ಕೊಟ್ಟದ್ದನ್ನು ಹೇಳಿದಾಗ, ಅವರು, 'ಅಯ್ಯೋ, ಆ ಬಚ್ಚಾಳಿಗೆ ನೀವು ಎಂಟು ಸಾವಿರ ರೂಪಾಯಿ ಕೊಟ್ಟಿರಾ! ಅವನು ಅದನ್ನು ತಗೊಂಡು ಸೀದಾ ಬಾರಿಗೆ ಹೋಗಿರುತ್ತಾನೆ ಅಷ್ಟೆ!' ಎಂದರು.

'ರಾಜಗೋಪಾಲನಿಗೆ ಎಲ್ಲ ಬಗೆಯ ದುರಭ್ಯಾಸಗಳೂ ಇವೆ; ಅವನಿಂದಾಗಿಯೇ ರಾಮಚಂದ್ರ ರಾಯರು ಹತಾಶರಾಗಿ ಹೋಟೆಲು ಉದ್ಯಮದಲ್ಲಿಯೂ ಆಸಕ್ತಿ ಕಳೆದುಕೊಂಡು ಹೋಟೆಲ್ ಮುಚ್ಚಿ ಊರಿಗೆ ಬಂದು ಕುಳಿತಿದ್ದಾರಂತೆ' ಎಂದು ತಂತ್ರಿಗಳು ತಮಗೆ ತಿಳಿದಿದ್ದ ಸಂಗತಿಗಳನ್ನು ನಂದಕಿಶೋರನಿಗೆ ತಿಳಿಸಿದರು.

ಇದಾದ ನಂತರ ನಂದಕಿಶೋರ, ರಾಜ ಗೋಪಾಲನನ್ನು ಭೇಟಿಯಾಗುತ್ತಿರುವುದು ಈಗಲೇ. ತನ್ನನ್ನು ಹುಡುಕಿಕೊಂಡು ಅವನು ಇಲ್ಲಿಯವರೆಗೂ ಬಂದು, ತನಗಾಗಿ ಕಾದುಕುಳಿತು ಭೇಟಿಯಾದದ್ದು ಹಣಕ್ಕಾಗಿಯೇ ಎನ್ನುವುದಕ್ಕೆ ಸಂಶಯವಿಲ್ಲ. ದುರ್ಗಾದರ್ಶಿನಿ ಹೋಟೆಲಿನಿಂದ ಮೆತ್ತಗೆ ಹೊರಬಂದ ನಂದಕಿಶೋರ ಸಾಮಾನುಗಳನ್ನು ಕೊಳ್ಳುವುದಕ್ಕೆ ಹೋಗದೆ ನೇರವಾಗಿ ಮನೆಗೆ ಬಂದುಬಿಟ್ಟ.

ರಾಜನ ದುರಭ್ಯಾಸ, ಪುಂಡಾಟಿಕೆಗಳ ಬಗ್ಗೆ ನಾರಾಯಣ ತಂತ್ರಿಗಳು ನಂದಕಿಶೋರನಿಗೆ ಸಾಕಷ್ಟು ಮಾಹಿತಿ ನೀಡಿದ್ದರು. ಅವನ ವರ್ತನೆ ನೋಡಿದರೆ, ಅವರಿವರಲ್ಲಿ ವಿಚಾರಿಸಿ ತನ್ನನ್ನು ಹುಡುಕಿಕೊಂಡು ಮನೆಗೂ ಬಂದಾನು ಎಂದು ನಂದಕಿಶೋರನಿಗೆ ಅನಿಸಿತು.

ಅಂಗಿ, ಪ್ಯಾಂಟು ಕೂಡ ಕಳಚದೆ ಪಕ್ಕದ ಜಮೀನಿನ ಒಡೆಯ ನರಸಿಂಹನ ಮನೆಗೆ ಹೋದ. ನರಸಿಂಹ ಕೃಷಿಕನಾದರೂ ಬಹಳ ಸಾಹಸವಂತ. ಯಾರಾದರೂ ಎಗರಾಡಿದರೆ ನಾಲ್ಕು ಬಾರಿಸುವ ಪ್ರವೃತ್ತಿಯೂ ಅವನಲ್ಲಿದೆ. ಅದಕ್ಕೆ ತಕ್ಕ ಹಾಗೆ ಎತ್ತರದ ಕಟ್ಟುಮಸ್ತಾದ ಯುವಕ. ನಂದಕಿಶೋರ ನರಸಿಂಹನ ಬಳಿಗೆ ಹೋಗಿ, 'ಒಂದು ಸಹಾಯ ಆಗಬೇಕಲ್ಲ ನರಸಿಂಹ' ಎಂದ.

'ಹೇಳಿ ಸರ್.'